# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ ಎಫ ಸಿ ನ್ಯಾಯಾಲಯ ಹಿರೇಕೆರೂರು

ಸಿ.ಸಿ. ನಂಃ 26/2021

ಸಿ.ಡಬ್ಲ್ಯೂಃ 3 ಪಿ.ಡಬ್ಲ್ಯೂಃ 3

ಸಾಕ್ಷಿದಾರರ ಹೆಸರುಃ - ಮಲ್ಲಪ್ಪ ತಂದೆ ಮಹದೇವಪ್ಪ ಬಣಕಾರ

ವಯಸ್ಸುಃ - 52 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ಹಿರೇಮೊರಬ

ದಿನಾಂಕಃ 19-10-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಪ್ರಭಾರ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಪರಿಚಯ ಇರುತ್ತಾನೆ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಚಾಸಾ-1 ರವರ ಮನೆಯಲ್ಲಿ ಸುಮಾರು 3 ವರ್ಷದ ಹಿಂದೆ ಕಳ್ಳತನವಾಗಿತ್ತು. ಏನೇನು ಕಳ್ಳತನವಾಗಿದ್ದವು ಎಂದು ಗೊತ್ತಿರುವುದಿಲ್ಲ. ಯಾರು ಪಿರ್ಯಾದಿಯನ್ನು ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿಲ್ಲ. ಸಾಕ್ಷಿ ಘಟನಾ ಜಾಗೆಯ ಪಂಚನಾಮೆಯಲ್ಲಿ ತಾನು ಸಹಿ ಮಾಡಿರುವುದಾಗಿ ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಚಾಸಾ-1 ರವರ ಮನೆಯಲ್ಲಿ ನಾನು ಕಳ್ಳತನವಾದ ನಂತರ ಪೋಲಿಸರು ಬಂದಾಗ ಸಹಿಯನ್ನು ಮಾಡಿರುತ್ತೇವೆ. ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿ 2 ಪೋಟೋಗಳಲ್ಲಿ ತಾನು ಇರುವುದಾಗಿ ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ಈಗಾಗಲೇ ನಿಪಿ-3 ಹಾಗೂ 4 ಎಂದು ಹಾಗೂ ಅವುಗಳ ಸಿಡಿಯನ್ನು ನಿಪಿ-3(ಎ) ಎಂದು ಗುರುತಿಸಲಾಗಿದೆ. ಸದರಿ ಪೋಟೋಗಳನ್ನು ಪಂಚನಾಮೆಯ ಕಾಲದಲ್ಲಿ ತೆಗೆದಿರುತ್ತಾರೆ. ಪೋಲಿಸರು ನಮ್ಮನ್ನು ಎಲ್ಲಿಗೂ ಕರೆಸಿಕೊಂಡಿರುವುದಿಲ್ಲ ಹಾಗೂ ಯಾರನ್ನು ತೋರಿಸಿಲ್ಲ. ಪೋಲಿಸರಿಗೆ ಮರು ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರು ಪಾಟೀ ಸವಾಲಿಗೆ ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಕೋರಿಕೆಯನ್ನು ಮನ್ನಿಸಲಾಯಿತು.)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ15-03-2019 ರಂದು ...................... ವಿಷಯವನ್ನು ಕೇಳಿ ತಿಳಿದುಕೊಂಡೆವು ಎಂದು ಓದಿ ಹೇಳಲಾದ ಹೇಳಿಕೆಯ ಭಾಗವನ್ನು ಸಾಕ್ಷಿ ಸುಳ್ಳೆಂದು ಅಲ್ಲಗಳೇದ ಕಾರಣ, ಸದರಿ

ಸಿ.ಸಿ. ನಂಃ 26/2021
ಸಿ.ಡಬ್ಲ್ಯೂಃ 3 ಪಿ.ಡಬ್ಲ್ಯೂಃ 3

ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ಚಾಸಾ-1 ರವರು ಪಿರ್ಯಾದಿಯನ್ನು ಕೊಟ್ಟಿರುತ್ತಾರೆ ಎನ್ನುವುದು ನಿಜ. ಪಂಚನಾಮೆಯ ಕಾಲದಲ್ಲಿ ನನ್ನ ಜೊತೆ ಚಾಸಾ-2 ರವರು ಇದ್ದರು ಎನ್ನುವುದು ನಿಜ. ಪಂಚನಾಮೆಯ ಕಾಲದಲ್ಲಿ 1 ಕಬ್ಬಿಣದ ರಾಡು, 1 ಸ್ಟೀಲ್ ಕಿಲಿ, ಒಂದು ಕಬ್ಬಿಣದ ಕಂದ್ಲಿ ಹಾಗೂ 1 ಕುಡುಗೋಲನ್ನು ಜಪ್ತಿ ಮಾಡಿರುತ್ತಾರೆ ಎನ್ನುವುದು ನಿಜ. ಸದರಿ ಪಂಚನಾಮೆಯನ್ನು ದಿಃ 16-03-2019 ರಂದು 2-00 ರಿಂದ 3-00 ಗಂಟೆಯವರೆಗೆ ಮಾಡಿರುತ್ತಾರೆ ಎನ್ನುವುದು ನಿಜ. ನ್ಯಾಯಾಲಯದಲ್ಲಿರುವ ಮುದ್ದೆ ಮಾಲುಗಳನ್ನು ಆ ದಿನ ಜಪ್ತಿ ಪಡಿಸಿರುತ್ತಾರೆ ಎನ್ನುವುದು ನಿಜ. ಸದರಿ ಮುದ್ದೆ ಮಾಲುಗಳನ್ನು ಈಗಾಗಲೇ ಮುದ್ದೆ ಮಾಲು - 1 ರಿಂದ 4 ಎಂದು ಗುರುತಿಸಲಾಗಿದೆ.

ಈ ದಿವಸ ತಾವು ನನಗೆ ........................ ಅಳವಡಿಸಿಕೊಂಡು ಓದಲು ವಿನಂತಿ ಎಂದು ಓದಿ ಹೇಳಲಾದ ಮರು ಹೇಳಿಕೆಯ ಭಾಗವನ್ನು ಸಾಕ್ಷಿ ಸುಳ್ಳೆಂದು ಅಲ್ಲಗಳೇದ ಕಾರಣ, ಸದರಿ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು. ಹೇಳಿಕೆ ಹಾಗೂ ಮರುಹೇಳಿಕೆಯನ್ನು ಕೊಟ್ಟಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 1 ನೇ ಆರೋಪಿ ಪರ ಶ್ರೀ ಸಿ. ಎಚ್. ಪಿ. ವಕೀಲರಿಂದಃ

ನಾನು ಹಾಗೂ ಚಾಸಾ-1 ರವರು ಆತ್ಮೀಯವಾಗಿರುತ್ತೇವೆ ಎನ್ನುವುದು ನಿಜ. ಇಂದು ನ್ಯಾಯಾಲಯಕ್ಕೆ ಚಾಸಾ-1 ರವರು ಕರೆದುಕೊಂಡು ಬಂದಿರುತ್ತಾರೆ ಎನ್ನುವುದು ನಿಜ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ಮಾಹಿತಿ ಇರುವುದಿಲ್ಲ. ಮುದ್ದೆ ಮಾಲು -1 ರಿಂದ 4 ರ ಮೇಲೆ ನಾನು ವಿಶೇಷವಾದ ಗುರುತನ್ನು ಮಾಡಿಲ್ಲ. ಇದೇ ವಸ್ತುಗಳನ್ನು ಜಪ್ತಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ ಎನ್ನುವುದು ನಿಜ. ಪಿರ್ಯಾದಿಯನ್ನು ಯಾರು ಯಾವಾಗ ಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಇಲ್ಲದೇ ಇದ್ದರು ಸಹ ಚಾಸಾ-1 ರವರ ಮಾತನ್ನು ಕೇಳಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು-1 ರಿಂದ 4 ನ್ನು ಪೋಲಿಸರು ಜಪ್ತಿ ಪಡಿಸಿಕೊಂಡ ಬಗ್ಗೆ ಮಾಹಿತಿ ಇರುವುದಿಲ್ಲ.

ಸಿ.ಸಿ. ನಂಃ 26/2021
ಸಿ.ಡಬ್ಲ್ಯೂಃ 3 ಪಿ.ಡಬ್ಲ್ಯೂಃ 3

ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಎಂ. ಬಿ. ಪಿ. ವಕೀಲರಿಂದಃ

1 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 19-10-2022

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು